Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 44 | 23rd April 2025

## ರೋಟರಿ ಕುಟುಂಬ ಸಮ್ಮಿಲನ

ಸ್ಥಳ :

**ಅಲ್ಮೆಡಾ ಹೋಮ್ ಸ್ಟೇ and ರೆಸಾರ್ಟ್ ಹಂಗಾರಕಟ್ಟೆ**

**ಪ್ರಾಯೋಜಕರು :**

ರೊ. ಡಾ. ಉಮೇಶ್ ಪುತ್ರನ್, ರೊ. ವಿವಿಯನ್ ಕ್ರಾಸ್ಟೋ,
ರೊ. ಜೋನ್ಸನ್ ಅಲ್ಮೆಡಾ, ರೊ. ಡಾ. ಪ್ರಿಯಾಂಕಾ ಜೋಗಿ,
ರೊ. ರೋನಾಲ್ಡ್ ಬರೆಟ್ಟೋ, ರೊ. ಸುರೇಶ್ ಮಲ್ಯ,
ರೊ. ಲೊಯ್ ಕರ್ವಲೋ

**39th year of Service and Fellowship**



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor









ತಾ. 17–04–2025ರ ವಾರದ ಸಭೆಯು ಶಿವಪ್ರಸಾದ್ ಗ್ರ್ಯಾಂಡ್ ಹೊಟೇಲ್‌ನ ಕ್ರಿಸ್ಟಲ್ ಸಭಾಂಗಣದಲ್ಲಿ ನಡೆಯಿತು. ರೊ. ಶ್ರೀನಿವಾಸ್ ಶೇಟ್‌ರವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭಗೊಂಡಿತು. ವಾರದ ಸಭೆಯು ಕ್ಲಬ್ ಅಸೆಂಬ್ಲಿಯಾಗಿದ್ದು, ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ನೆರೆದಿದ್ದ ಸದಸ್ಯರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು. ಕಾರ್ಯದರ್ಶಿಯವರ ಅನುಪಸ್ಥಿತಿಯಲ್ಲಿ ಸಹಕಾರ್ಯದರ್ಶಿ ರೊ. ಸಚಿನ್ ನಕ್ಕತ್ತಾಯರವರು ಕಳೆದ ವಾರದ ವರದಿಯನ್ನು ಮಂಡಿಸಿದರು. ರೊ. ವಿವಿಯನ್ ಕ್ರಾಸ್ತಾರವರು ವಾರದ ಚಿಂತನೆಯಲ್ಲಿ ಮಾಡಿದ ತಪ್ಪುಗಳಿಂದ ಪಾಠವನ್ನು ಕಲಿಯಬೇಕು ಹಾಗೂ ಮತ್ತದೇ ತಪ್ಪುಗಳು ನಡೆಯದಂತೆ ಜಾಗೃತೆ ವಹಿಸಬೇಕು ಎಂದರು. ರೋಟರಿ ಮಾಹಿತಿಯನ್ನು ನೀಡಿದ ರೊ. ಸಚಿನ್ ನಕ್ಕತ್ತಾಯರವರು 2025–26ನೇ ವರ್ಷಕ್ಕೆ ತಮ್ಮ ಅವಧಿಯಲ್ಲಿ ನಡೆಸಬೇಕೆಂದು ಯೋಜಿಸಿರುವ District projectಗಳ ಬಗ್ಗೆ ವಿವರಣೆ ನೀಡಿದರು.

ನಂತರ ಮಾತನಾಡಿದ ಅಧ್ಯಕ್ಷರು ಕೆಲವೊಂದು ವಿಚಾರಗಳನ್ನು ಸಭೆಯಲ್ಲಿ ಮಂಡಿಸಿದರು. ತಾ. 06–04–2025ರಂದು ತಲ್ಲೂರಿನ ಅಂಬೇಡ್ಕರ್ ಭವನದಲ್ಲಿ ನಡೆದ ದಂತ ತಪಾಸಣಾ ಹಾಗೂ ಚಿಕಿತ್ಸಾಶಿಬಿರದಲ್ಲಿ ಸ್ಥಳಾವಕಾಶದ ಕೊರತೆಯುಂಟಾದಾಗ ಶಾಮಿಯಾನ ಹಾಕಬೇಕಾದ ಅನಿವಾರ್ಯತೆ ಉಂಟಾಯಿತು. ಈ ಶಿಬಿರಕ್ಕೆ ಒಟ್ಟು ಹದಿನೆಂಟು ಸಾವಿರ ರೂಪಾಯಿ ವೆಚ್ಚವಾಯಿತು ಎಂದರು. ಈ ಖರ್ಚಿನ ಒಂದು ಭಾಗವಾದ ಸುಮಾರು ಆರು ಸಾವಿರ ರೂಪಾಯಿಗಳನ್ನು ತಲ್ಲೂರು ಗ್ರಾಮ ಪಂಚಾಯತ್ ಭರಿಸಿದ್ದು, ಅದಕ್ಕಾಗಿ ತಲ್ಲೂರು ಗ್ರಾಮಪಂಚಾಯತಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ನಮ್ಮ ಕ್ಲಬ್ಬಿನ ಸಭಾಭವನವಾದ ರೋಟರಿ ಮಧುಸೂದನ ಕುಶೆ ಹಾಲ್‌ನ ನಿರ್ವಹಣಾ ವೆಚ್ಚವಾಗಿ ರೂ. 6,000/– ನೀಡಬೇಕೆಂದು ಆ ಶಾಲೆಯ ಮುಖ್ಯೋಪಾಧ್ಯಾಯರು ಮನವಿ ಮಾಡಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಅಧ್ಯಕ್ಷರು ತಮ್ಮ ಮಾತನ್ನು ಮುಂದುವರಿಸುತ್ತಾ ತಲ್ಲೂರಿನ ಸರಕಾರಿ ಸ್ಥಳದಲ್ಲಿ ಗಿಡನೆಟ್ಟು ಅರಣ್ಯ ಮಾಡುವ ತಮ್ಮ ಯೋಜನೆಯನ್ನು ಸಭೆಗೆ ಮಂಡಿಸಿದರು. ಯಾವುದಾದರೂ CSR Fund ಲಭಿಸುತ್ತಿದ್ದರೆ ಉತ್ತಮವಾಗಿ ಮಾಡಬಹುದು ಅದಕ್ಕೆ ಅಗತ್ಯವಿರುವ ಆವರಣ ಗೋಡೆ, ನೀರಿನ ವ್ಯವಸ್ಥೆ ಹಾಗೂ ಪಕ್ಕದಲ್ಲೊಂದು Walking Path ನಿರ್ಮಿಸಲು ಅವಕಾಶ ಇರುವುದರಿಂದ ನಿಧಾನವಾಗಿ ಅದನ್ನು ಅಭಿವೃದ್ಧಿ ಪಡಿಸುವ ಇಂಗಿತವನ್ನು ಸಭೆಗೆ ತಿಳಿಸಿದರು.


ದಿನಾಂಕ 23–04–2025ರಂದು ಹಂಗಾರಕಟ್ಟೆಯಲ್ಲಿರುವ ಆಲ್ಮೇಡ ಹೋಂ ಸ್ಟೇ ಹಾಗೂ ರೆಸಾರ್ಟ್‌ನಲ್ಲಿ ನಡೆಯುವ ನಮ್ಮ ಕ್ಲಬ್‌ನ ಕುಟುಂಬ ಸಮ್ಮಿಲನ ಕಾರ್ಯಕ್ರಮಕ್ಕೆ ತೆರಳಲು ಎಲ್ಲರೂ ಕುಂದಾಪುರದ ಯುನಿಟಿ ಹಾಲ್ ಬಳಿ ಒಂದಾಗಿ ವಾಹನದಲ್ಲಿ ಜೊತೆಗೆ ತೆರಳುವ ಬಗ್ಗೆ ಎಲ್ಲಾ ಸದಸ್ಯರಿಗೆ ಕರೆ ಮಾಡಿ ಸಂಯೋಜನೆ ಮಾಡುವ ಬಗ್ಗೆ ಅಧ್ಯಕ್ಷರು ತಿಳಿಸಿದರು. ಅಂತೆಯೇ ಮೇ ತಿಂಗಳಿನಲ್ಲಿ ಆಯೋಜಿಸಲು ಇಚ್ಛಿಸಿರುವ ಬ್ರಹ್ಮಾವರದ ಕಿಂಗ್ ಆಫ್ ಕಿಂಗ್ಸ್‌ಗೆ ಪಿಕ್ನಿಕ್ ಹೋಗುವ ಬಗ್ಗೆ ವಿಚಾರ ವಿನಿಮಯ ನಡೆಯಿತು. ಮೇ 18 ನೇ ತಾರೀಕಿನಂದು ಪಿಕ್ನಿಕ್ ಆಯೋಜಿಸುವ ಬಗ್ಗೆ ಅಧ್ಯಕ್ಷರು ಹೇಳಿದಾಗ ಆದಿತ್ಯವಾರ ಹಾಗೂ ಮದುವೆ ಮತ್ತಿತರ ಕಾರ್ಯಕ್ರಮಗಳಿರುವುದರಿಂದ ಸದಸ್ಯರ ಅಭಿಪ್ರಾಯವನ್ನು ಕೇಳಿಯೇ ದಿನವನ್ನು ನಿಗದಿಪಡಿಸುವುದು ಉತ್ತಮ ಎಂದು ಹಾಜರಿದ್ದ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ನಂತರ ಮೇ ತಿಂಗಳಲ್ಲಿ ನಡೆಸಲು ಆಯೋಜಿಸಿರುವ ಕಾರ್ಯಕ್ರಮಗಳ ಬಗ್ಗೆ ವಿಮರ್ಶಿಸಲಾಯಿತು. ಸರಳವಾಗಿ ನಡೆದ ಸಭೆಯ ಕೊನೆಯಲ್ಲಿ ರೊ. ದೇವರಾಜ್‌ರವರು ಧನ್ಯವಾದವನ್ನು ಸಮರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಂದಿನ ವಾರಕ್ಕೆ ಮುಂದೂಡಲಾಯಿತು.

# MANIKYA - 2025

**District Assembly**
**and**
**District Team Training Seminar 2025-26**

**Rotary Club Kota - Saligrama, Zone 2,**
**Rotary District 3182**

**Date : 10th & 11th May 2025**
**Venu : President Convention Hall, Thekkatte**




## Rotary Information

The Rotary District projects for 2025-26 aim to create a positive impact across multiple sectors. In Education, initiatives focus on empowering teachers and providing career guidance to students. The Environment program includes activities like planting trees and promoting scientific recycling of plastics and waste to foster sustainability. Health initiatives target the prevention of non-communicable diseases through awareness and early intervention. Additionally, the district emphasizes Road Safety by conducting a 1-minute video competition for college students on traffic rules and road sense, as well as promoting care and respect for rickshaw and taxi drivers. These projects collectively aim to build a healthier, safer, and more sustainable community.

## ಕಳೆದ ವಾರದ ಚಿಂತನೆ

ನಾವು ಮಾಡಿದ ತಪ್ಪುಗಳಿಂದ ಬೇರೆಯವರು ಪಾಠ ಕಲಿಯುತ್ತಾರಾದರೆ, ಬೇರೆಯವರ ತಪ್ಪುಗಳಿಂದ ನಾವೂ ಪಾಠ ಕಲಿಯಬೇಕು. ಸಾಮಾನ್ಯ ವ್ಯಕ್ತಿಗಳು ತಾವು ಮಾಡಿದ ತಪ್ಪುಗಳಿಂದ ಪಾಠ ಕಲಿಯುತ್ತಾರೆ. ಬುದ್ಧಿವರಂತರು ಇತರರು ಮಾಡಿದ ತಪ್ಪುಗಳಿಂದ ಪಾಠ ಕಲಿಯುತ್ತಾರೆ. ಆದರೆ ಸ್ವತಹ ಮಾಡಿದ ಅಥವಾ ಇತರರು ಮಾಡಿದ ತಪ್ಪುಗಳನ್ನು ನೋಡಿಯೂ ಯಾವುದೇ ಪಾಠ ಕಲಿಯದವರು ಜೀವನದುದ್ದಕ್ಕೂ ದಂಡವನ್ನು ಕಟ್ಟುತ್ತಾ ಜೀವನವನ್ನು ಕಳೆಯುತ್ತಾರೆ.

ನೀಡಿದವರು – ರೊ. ವಿವಿಯನ್ ಕ್ರಾಸ್ಟೋ

## ಹಗಲುವೇಷ

**ಆ ಸ್ಮೃತಿಪಟಲದಿ ಹುದುಗಿಹ**
**ನೋವು ನಲಿವುಗಳ ಭಗ್ನಾವಶೇಷ**
**ಸ್ಫುರಣಿಸಲು ಹಲವು**
**ಬಣ್ಣಗಳ ಭಾವಾವೇಷ। ಮಾನವ;**
**ಆ ಬಣ್ಣಗಳ ಮುಖವಾಡ**
**ಧರಿಸಿ ನಲಿವನು ಜಗದಲಿ**
**ಮಾಡಿ ನಾನಾ ಹಗಲುವೇಷ ॥**

**– ರೂಪಕ್ ನಾಗರಾಜ್**



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 27-04-2025ನೇ ಆದಿತ್ಯವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಜಾನ್ಸನ್ ಡಿ'ಅಲ್ಮೇಡಾ ಮತ್ತು ಆ್ಯನ್ ಲವಿನಾ ಅಲ್ಮೇಡಾರವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ ಶುಭಾಶಯಗಳು. ಮೊ. : 9620288881

**ಮರ್ಕಟಸ್ಯ ಸುರಾಪಾನಮ್**
**ಮಧ್ಯೆ ವೃಶ್ಚಿಕ ದಂಶನಮ್**
**ತನ್ಮಧ್ಯೆ ಭೂತ ಸಂಚಾರಂ**
**ಯದ್ವಾ ತದ್ವಾ ಭವಿಷ್ಯತಿ**

ಮೊದಲೇ ಮಂಗ ಸ್ವಲ್ಪ ಮದ್ಯಪಾನ ಮಾಡಿದೆ ಮದ್ಯದ ಅಮಲಿನಲ್ಲಿ ತೂರಾಡುವಾಗ ಅದಕ್ಕೆ ಚೇಳು ಕಚ್ಚಿದೆ ಇಷ್ಟು ಸಾಲದೆಂಬಂತೆ ಅದರ ದೇಹದಲ್ಲಿ ಭೂತ ಪ್ರವೇಶಿಸಿದರೆ ಅದು ಯಾವ ರೀತಿಯಲ್ಲಿ ವರ್ತಿಸುತ್ತದೋ ತದ್ರೀತಿ ಒಬ್ಬ ಅಯೋಗ್ಯ ವ್ಯಕ್ತಿಯ ಕೈಯಲ್ಲಿ ಯಜಮಾನಿಕೆ, ಅಧಿಕಾರ ಸಿಕ್ಕಿದರೆ ಪರಿಣಾಮ ವಿನಾಶಕಾರಿಯಾಗುವುದರಲ್ಲಿ ಏನೇನೂ ಸಂಶಯವಿಲ್ಲ

❖"We make a living by what we get, but we make a life by what we give." ...

❖"Only a life lived for others is a life worthwhile." ......

❖"I don't know what your destiny will be, but one thing I do know: the only ones among you who will be really happy are those who have sought and found how to serve."

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com



Rtn. K. T. Surendranath 1995-96



Rtn. B. C. Somayaji 1997-98




Rtn. S. Subraya Halambi 1999-2000



Rtn. K. Seetharama Nackathaya 2001-02



Rtn. Dr. Umesh Puthran 2003-04



Rtn. A. Shantharam Pai 2005-06



Rtn. S. Sadananda Chatra 1996-97



Rtn. K. Suresh Kamath 1998-99




Rtn. S. Vijaya Shetty 2000-01




Rtn. U. S. Shenoy 2002-03



Rtn. Dr. B. V. Udupa 2004-05



Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24

*This Bulletin is sponsored by :*
Rtn. G. Shridhar Shetty
Mob. : 9449039300

For Private Circulation only